ಇ) ಮತ್ತು ಈ) ಕರ್ನಾಟಕ ಗೃಹ ಮಂಡಳಿಯು 9.00 ಲಕ್ಷ ರೂ.ಗಳನ್ನು 1987-88 ನೇ ಸಾಲಿನ ಅಂತ್ಯದಲ್ಲಿ ನೀಡಿದ್ದರಿಂದ ಅಭಿವೃದ್ಧಿಗಾಗಿ ಅದೇ ವರ್ಷ ಕೇವಲ 43, 800-00ರೂ ಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಉಳಿಕೆ ಹಣವನ್ನು ಸೇರಿಸಿ ಈ ಕಾಲೋನಿಗಳ ಅಭಿವೃದ್ಧಿಗಾಗಿ 1998-99 ರವರೆಗೆ ಒಟ್ಟು 36.23 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಲ್ಲಿ ಖಾಲಿ ಇರುವ ಹುದ್ದೆಗಳು.

1115 (1535)

ಶ್ರೀ ಡಿ.ವಿ. ಸದಾನಂದ ಗೌಡ. (ಪುತ್ತೂರು) ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

01) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಹಾಸ್ಟೆಲ್‌ಗಳಲ್ಲಿ ಖಾಲಿ ಇರುವ ವಾರ್ಡ್‌ನ್ ಹುದ್ದೆಗಳ ಸಂಖ್ಯೆ ಎಷ್ಟು? ಮತ್ತು ಈ ಹುದ್ದೆಗಳನ್ನು ಎಂದಿನಿಂದ ಭರ್ತಿಮಾಡಲಾಗುವುದು?

02) ಇಲಾಖೆಯ ಹಾಸ್ಟೆಲ್‌ಗಳಿಗೆ ಆಹಾರ ಸರಬರಾಜು ಮಾಡಲು ಅನುಸರಿಸುವ ನಿಯಮಾವಳಿಗಳು ಏನು? ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘಗಳಿಂದ ಈ ಸರಬರಾಜು ಮಾಡುವಂತೆ ಸರ್ಕಾರ ಆಲೋಚಿಸಿದೆಯೇ? ಸರಬರಾಜಿನ ಉಸ್ತುವಾರಿಗೆ ಸಮಿತಿ ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್. (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

01. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಹಾಸ್ಟೆಲ್‌ಗಳಲ್ಲಿ ಈ ಕೆಳಕಂಡಂತೆ ನಿಲಯಪಾಲಕರ ಹುದ್ದೆಗಳು ಖಾಲಿ ಇರುತ್ತದೆ.

01.	ನಿಲಯಪಾಲಕರು (ಪುರುಷರು)	35 ಹುದ್ದೆ
02.	ನಿಲಯಪಾಲಕರು (ಮಹಿಳೆಯರು)	41 ಹುದ್ದೆ
	ಒಟ್ಟು -	76 ಹುದ್ದೆ

ಇಲಾಖೆಯ ವ್ಯಂದ ಮತ್ತು ನೇಮಕಾತಿಯ ನಿಯಮಗಳನ್ವಯ, ಈ ಎಲ್ಲಾ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಬೇಕಾಗಿದೆ. ಈ ಹುದ್ದೆಗಳನ್ನು ಜರೂರು ತುಂಬಲು ಕ್ರಮವನ್ನು ಜರುಗಿಸಲಾಗುವುದು.

02) ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್‌ಗಳಿಗೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಹಾಗೂ ಮತ್ತಿತರ ವಸ್ತುಗಳನ್ನು ಜನತಾ ಬಜಾರಿನಿಂದ, ನ್ಯಾಷನಲ್ ಕೋ-ಆಪರೇಟೀವ್ ಕನ್ಸ್ಯೂಮರ್ಸ್ ಫೆಡರೇಷನ್ ಆಫ್ ಇಂಡಿಯಾ (ಎನ್‌ಸಿಸಿಎಫ್) ಕೃಷಿ ಉತ್ಪನ್ನ ಮಾರುಕಟ್ಟೆ ಸಂಘ ಹಾಗೂ (ಟಿಎಪಿಸಿಎಂ) ಕೃಷಿ ಮಾರುಕಟ್ಟೆ ಸಮಿತಿ (ಎಪಿಎಂಸಿ) ಅಥವಾ ಮುಕ್ತಮಾರುಕಟ್ಟೆಯಿಂದ ಜನತಾ ಬಜಾರ್ ದರಗಳಿಗಿಂತ ಕಡಿಮೆ ದರದಲ್ಲಿ ಖರೀದಿಸಬಹುದಾಗಿದೆ. ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘಗಳಿಂದ ಸರಬರಾಜು ಮಾಡದಂತೆ ಸರ್ಕಾರದ ಆಲೋಚನೆ ಇರುವುದಿಲ್ಲ. ಸರಬರಾಜು ಉಸ್ತುವಾರಿಗೆ ಸಮಿತಿ ರಚಿಸುವ

ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಪುತ್ತೂರು ನಗರದಲ್ಲಿ ಒಳಚರಂಡಿ ಯೋಜನೆ

1116 (1537)

ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಎಡಿಬಿ ಯೋಜನೆಯಲ್ಲಿ ಪುತ್ತೂರು ನಗರ ಸಭೆ ಹಮ್ಮಿಕೊಂಡ ಯೋಜನೆಗಳು ಯಾವುವು ಅವು ಈಗ ಯಾವ ಹಂತದಲ್ಲಿವೆ. ಎಂದಿನಿಂದ ಕಾರ್ಯಾರಂಭ ಮಾಡಲಾಗುವುದು?

ಆ) ಎಡಿಬಿ ಯೋಜನೆಯಲ್ಲಿ ಪುತ್ತೂರು ನಗರದ ಒಳಚರಂಡಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರಕ್ಕಿದೆಯೇ, ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಪರ್ಯಾಯ ಯೋಜನೆಗಳನ್ನೇನಾದರೂ ಕೈಗೊಳ್ಳಲಾಗುವುದೇ?

ಶ್ರೀ ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಎಡಿಬಿ ಯೋಜನೆಯ ಅಡಿಯಲ್ಲಿ ಹಲವಾರು ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು. ಉದಾಹರಣೆಗೆ. ನೀರು ಸರಬರಾಜು, ರಸ್ತೆ, ಸಂಚಾರಿ ವ್ಯವಸ್ಥೆ, ಕೊಳಚೆಅಭಿವೃದ್ಧಿ ಮತ್ತು ಮಾರುಕಟ್ಟೆಗಳು ಇತ್ಯಾದಿ. ಪುತ್ತೂರು ನಗರದ ಜೊತೆಯಲ್ಲಿ ಇನ್ನೂ ಕೆಲವೊಂದು ನಗರಗಳಲ್ಲಿ ಮೇಲಿನಂತಹ ಯೋಜನೆಗಳನ್ನು ತೆಗೆದುಕೊಳ್ಳುವ ಬಗ್ಗೆ ಎಡಿಬಿ ಜೊತೆಯಲ್ಲಿ ಮಾತುಕತೆ ನಡೆಯುತ್ತಿದೆ. ಈ ಮಾತುಕತೆಯು ಇನ್ನೂ ಸಂಪೂರ್ಣವಾಗಿ ಮುಗಿದಿಲ್ಲ. ಈ ಮಾತುಕತೆ ಪೂರ್ಣಗೊಂಡ ನಂತರ ಎಡಿಬಿ ಜೊತೆ ಒಪ್ಪಂದಕ್ಕೆ ಸಹಿ ಆದ ನಂತರ ಈ ಮೇಲಿನ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಆ) -ಇಲ್ಲಾ-

ಪೌರಾಡಳಿತ ಇಲಾಖೆಯಲ್ಲಿ ಸರ್ಕಾರದ ಗಮನಕ್ಕೆ ತರದೆ ಮುಂಬಡ್ತಿ ನೀಡಿರುವುದು

1118(1609)

ಶ್ರೀ ಯು. ಆರ್. ಸಭಾಪತಿ (ಉಡುಪಿ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. 1996-97, 97-98 ಮತ್ತು 98-99 ಮಾರ್ಚ್‌ವರೆಗೆ ಸರ್ಕಾರದ ಗಮನಕ್ಕೆ ಬಾರದೆ ಪೌರಾಡಳಿತ ಇಲಾಖೆಯಲ್ಲಿ ಮುಂಬಡ್ತಿಗಳನ್ನು ಮಾಡಲಾಗಿರುವುದು ನಿಜವೇ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಹಾಗೂ ಅದಕ್ಕೆ ಕಾರಣಗಳೇನು?
2. ಈ ರೀತಿ ಮುಂಬಡ್ತಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?
3. ಇನ್ನು ಮುಂದೆ ಮುಂಬಡ್ತಿ ಮಾಡುವಾಗ ಸರ್ಕಾರದ ಗಮನಕ್ಕೆ ತಾರದೆ ಮಾಡಬಾರದೆಂದು ಸುತ್ತೋಲೆ ಹೋರಡಿಸಿರುವುದು ನಿಜವೇ?
4. ಮುಂಬಡ್ತಿಗಾಗಿ ಕಾದಿರುವವರ ಸಂಖ್ಯೆ ಎಷ್ಟು?